# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ :462
ಸದಸ್ಯರ ಹೆಸರು : ಶ್ರೀಮತಿ ಬಲ್ಕೀಸ್ ಬಾನು
ಉತ್ತರಿಸುವ ಸಚಿವರು :ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು
ಉತ್ತರಿಸುವ ದಿನಾಂಕ :10.12.2025

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ. | ಶಿವಮೊಗ್ಗ ಜಿಲ್ಲಾ ವಿಭಾಗದಲ್ಲಿ ಇರುವ ರಾಜ್ಯ ರಸ್ತೆ ಸಾರಿಗೆ ನಿಗಮದ ಬಸ್‌ಗಳ ಸಂಖ್ಯೆ ಎಷ್ಟು; ಚಾಲಕರ ಸಂಖ್ಯೆ ಎಷ್ಟು; (ಸಂಪೂರ್ಣ ಮಾಹಿತಿ ನೀಡುವುದು) | ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ಶಿವಮೊಗ್ಗ ವಿಭಾಗದಲ್ಲಿ ಒಟ್ಟು 404 ಬಸ್‌ಗಳು ಇದ್ದು, ಸದರಿ ವಿಭಾಗದಲ್ಲಿ ಪ್ರಸ್ತುತ 408 ಚಾಲಕರು ಹಾಗೂ 110 ಹೊರಗುತ್ತಿಗೆ ಚಾಲಕರು ಸೇರಿ ಒಟ್ಟು 518 ಚಾಲಕರು ಕರ್ತವ್ಯ ನಿರ್ವಹಿಸುತ್ತಿದ್ದು, ವಿವರ ಈ ಕೆಳಕಂಡಂತಿದೆ. (see table below) |
| ಆ. | ಗ್ರಾಮೀಣ ಪ್ರದೇಶದಿಂದ ಜಿಲ್ಲಾ ಕೇಂದ್ರವಾದ ಶಿವಮೊಗ್ಗಕ್ಕೆ ಬರುವ ವಿದ್ಯಾರ್ಥಿಗಳಿಗೆ ಸರಿಯಾದ ಸಮಯಕ್ಕೆ ಬಸ್ ಸೌಲಭ್ಯ ಇಲ್ಲದೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಸಾರ್ವಜನಿಕ ಪ್ರಯಾಣಿಕರ ಹಾಗೂ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಕ.ರಾ.ರ.ಸಾ.ನಿಗಮದ ಶಿವಮೊಗ್ಗ ವಿಭಾಗದಿಂದ ಒಟ್ಟು 116 ಸಾಮಾನ್ಯ ಸಾರಿಗೆ ಅನುಸೂಚಿಗಳಿಂದ 965 ಏಕಸುತ್ತುವಳಿಗಳನ್ನು, 46 ನಗರ ಸಾರಿಗೆ ಅನುಸೂಚಿಗಳಿಂದ 484 ಏಕಸುತ್ತುವಳಿಗಳು ಹಾಗೂ 182 ವೇಗದೂತ ಸಾರಿಗೆ ಅನುಸೂಚಿಗಳಿಂದ 508 ಏಕಸುತ್ತುವಳಿಗಳನ್ನು ಸೇರಿ ಒಟ್ಟಾರೆ 344 ಅನುಸೂಚಿಗಳಿಂದ 1957 ಏಕಸುತ್ತುವಳಿಗಳಲ್ಲಿ ಸಾರಿಗೆ ಸೌಲಭ್ಯ ಕಲ್ಪಿಸಿ ಕಾರ್ಯಾಚರಣೆ ಮಾಡಲಾಗುತ್ತಿದೆ.<br><br>ಇವುಗಳಲ್ಲಿ 63 ಸಾಮಾನ್ಯ ಸಾರಿಗೆ ಅನುಸೂಚಿಗಳಿಂದ 364 ಏಕಸುತ್ತುವಳಿಗಳನ್ನು ಗ್ರಾಮೀಣ ಪ್ರದೇಶದಿಂದ ಜಿಲ್ಲಾ ಕೇಂದ್ರವಾದ ಶಿವಮೊಗ್ಗಕ್ಕೆ ಸಾರಿಗೆ ಸೌಲಭ್ಯ ಕಲ್ಪಿಸಿ ಪ್ರತಿದಿನ ನಿಯಮಿತವಾಗಿ ಸಮಯಕ್ಕೆ ಸರಿಯಾಗಿ ಕಾರ್ಯಾಚರಣೆ ಮಾಡಲಾಗುತ್ತಿದೆ. ಸದರಿ ಸೌಲಭ್ಯವನ್ನು ಸಾರ್ವಜನಿಕ ಪ್ರಯಾಣಿಕರು ಮತ್ತು ವಿದ್ಯಾರ್ಥಿಗಳು ಪಡೆದುಕೊಳ್ಳುತ್ತಿದ್ದು, ಪ್ರಸ್ತುತ ಕಲ್ಪಿಸಿರುವ ಸಾರಿಗೆ ಸೌಲಭ್ಯವು ಅವರ ಅವಶ್ಯಕತೆಗೆ ಅನುಗುಣವಾಗಿರುತ್ತದೆ. |
| ಇ. | ಬಂದಿದ್ದಲ್ಲಿ, ಬಸ್ ಸೌಲಭ್ಯವನ್ನು ಒದಗಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ? | |

| ಘಟಕ | ನಿಗಮದ ಚಾಲಕರು | ಹೊರಗುತ್ತಿಗೆ ಚಾಲಕರು | ಒಟ್ಟು |
|---|---|---|---|
| ಶಿವಮೊಗ್ಗ | 127 | 46 | 173 |
| ಭದ್ರಾವತಿ | 93 | 12 | 105 |
| ಸಾಗರ | 99 | 13 | 112 |
| ಹೊನ್ನಾಳಿ | 44 | 24 | 68 |
| ಶಿಕಾರಿಪುರ | 45 | 15 | 60 |
| **ಒಟ್ಟು** | **408** | **110** | **518** |

ಸಂಖ್ಯೆ: ಟಿಡಿ 217 ಟಿಸಿಕ್ಯೂ 2025

(ರಾಮಲಿಂಗಾರೆಡ್ಡಿ)
ಸಾರಿಗೆ ಮತ್ತು ಮುಜರಾಯಿ ಸಚಿವರು